**CC 153/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 153/2017

**ಸಿ ಡಬ್ಲೂ** 10
**ಪಿ ಡಬ್ಲೂಃ** 7

**ಸಾಕ್ಷಿಯ ಹೆಸರು -** **ಎಲ್. ಕೃಷ್ಣಾ**
**ತಂದೆಯ ಹೆಸರು -** **ಶಂಕರಪ್ಪ**
**ವಯಸ್ಸು -** 64 **ವರ್ಷಗಳು**
**ಉದ್ಯೋಗ -** **ನಿವೃತ್ತ ಪಿ ಎಸ್ ಐ**
**ವಾಸಸ್ಥಳ -** **ಟಿ ಬಿ ಡ್ಯಾಂ, ಹೊಸಪೇಟ**

**ಸಾಕ್ಷಿಯನ್ನು ದಿನಾಂಕಃ** 20-09-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **15-08-2016** ರಿಂದ **2021** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **24-09-2016** ರಂದು ರಾತ್ರಿ **08.00** ಗಂಟೆಗೆ ಡಿ ವಾಯ್ ಎಸ್ ಪಿ ರವರ ಕಚೇರಿಯಿಂದ ಬಂದ ಪತ್ರದ ಮೇರೆಗೆ ಪ್ರಕರಣದ ದೂರನ್ನು ಠಾಣಾ ಗುನ್ನೆ ನಂ. **211/2016** ರಲ್ಲಿ ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **1** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **10** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **10 (ಎ)** ಎಂದು ಗುರುತಿಸಲಾಯಿತು.

ದಿಃ **25-09-2016** ರಂದು ಕೃತ್ಯ ಸ್ಥಳದ ಪಂಚನಾಮೆಯನ್ನು ದೂರುದಾರರು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಮಾಡಿರುತ್ತೇನೆ.

ಸಾಕ್ಷಿ ನಿಪಿಃ 2 ರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ 3 ರ ಫೋಟೋ ನೋಡಿ ಗುರುತಿಸಿರುತ್ತಾರೆ. ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 11(ಎ) ಎಂದು ಗುರುತಿಸಲಾಯಿತು.

ಸಾಕ್ಷಿದಾರರಾದ ಚಾಸಾ -4 ರಿಂದ 6 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸರ್ಕಾರಿ ಆಸ್ಪತ್ರೆ, ಹೊಸಪೇಟೆ ಮತ್ತು ಎಸ್ ಡಿ ಎಂ, ಧಾರವಾಡದ ವೈದ್ಯರಿಂದ ವರದಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ತನಿಖೆ ಮುಕ್ತಾಯಗೊಳಿಸಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಪಿ ವಾಯ್., ವಕೀಲರಿಂದ**

ಪಿರ್ಯಾದುದಾರರು ನಮ್ಮ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಅಂದರೆ ಸರಿ. ಡಿ ವಾಯ್ ಎಸ್ ಪಿ ಕಚೇರಿಗೆ ಹೋಗುವುದಕ್ಕೂ ಮೊದಲು ಚಾಸಾ -1 ರವರು ನಮ್ಮ ಕಚೇರಿಯಲ್ಲಿ ಒಂದು ಬಾರಿ ದೂರು ನೀಡಿರುತ್ತಾರೆ. ಚಾಸಾ -1 ರವರು ಡಿ ವಾಯ್ ಎಸ್ ಪಿ ಕಚೇರಿಗೆ ದೂರನ್ನು ಏಕೆ ನೀಡಿರುತ್ತಾರೆ ಎಂದು ನಾನು ವಿಚಾರಿಸಿರುವುದಿಲ್ಲ.

ದಿಃ 23-05-2016 ರಂದು ಚಾಸಾ -1 ರವರು ನೀಡಿದ ದೂರನ್ನು ಡಿ ಪಿ 251/2016 ಎಂದು ದಾಖಲು ಮಾಡಲಾಗಿತ್ತು. ದಿಃ 18-06-2016 ರಂದು ಚಾಸಾ -1 ರವರು ನೀಡಿದ್ದ ದೂರನ್ನು ಅದೇ ಡಿ ಪಿ ನಂಬರ್ ಬಲ್ಲಿ ನಮೂದು ಮಾಡಿಕೊಳ್ಳಲಾಗಿದೆ ಅಂದರೆ ಸರಿ.

ಈ ಪ್ರಕರಣದ ದೂರನ್ನು ಸ್ವೀಕರಿಸಿದಾಗ ಮೇಲೆ ಹೇಳಿದ ಡಿ ಪಿ ಪ್ರಕರಣದಲ್ಲಿನ ದೂರು ಸತ್ಯವೋ ಸುಳ್ಳೋ ಎಂಬುದರ ಬಗ್ಗೆ ತಿಳಿದುಕೊಳ್ಳಲು ಮೇಲಾಧಿಕಾರಿಗಳನ್ನು ನಾನು ವಿಚಾರಿಸಿರುವುದಿಲ್ಲ.

ಆರೋಪಿ ಹಲ್ಲಿನ ವೈದ್ಯರು ಇರುತ್ತಾರೆ. ವೈದ್ಯರ ವಿರುದ್ಧ ನೇರವಾಗಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ಅವಕಾಶವಿಲ್ಲ ಎಂದು ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯ ಸುತ್ತೋಲೆ ಹೊರಡಿಸಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. 2 ದೂರುಗಳನ್ನು ನೀಡಿದಾಗಲೂ ಅವು ಸುಳ್ಳಿನಿಂದ ಕೂಡಿರುತ್ತವೆ ಎಂದು ಗೊತ್ತಿದ್ದದ್ದರಿಂದ ಡಿ ಪಿ ಪ್ರಕರಣ ದಾಖಲಿಸಿ ಆ ಬಗ್ಗೆ ಪ್ರಥಮ ವರ್ತಮಾನ ವರದಿ ಯನ್ನು ತಯಾರಿಸಿರಲಿಲ್ಲ ಅಂದರೆ ಸರಿಯಲ್ಲ.

ಚಾಸಾ -1 ರವರು ದೂರಿನಲ್ಲಿ ಹೇಳಿದ ಹಲ್ಲಿನಲ್ಲಿ ಬಿಟ್ಟಿರುತ್ತಾರೆ ಎನ್ನಲಾದ ಲೋಹದ ತುಂಡುಗಳನ್ನು ತನಿಖೆ ವೇಳೆಯಲ್ಲಿ ಜಪ್ತು ಪಡಿಸಿಕೊಂಡಿರುವುದಿಲ್ಲ. ಜಪ್ತು ಪಂಚನಾಮೆಯನ್ನು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಸೂಜಿ ತುಂಡುಗಳು ಹಲ್ಲಿನಲ್ಲಿಯೇ ಇದ್ದ ಬಗ್ಗೆ ಚಾಸಾ -1 ರವರು ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಸೂಜಿಗಳು ಹಲ್ಲಿನಲ್ಲಿವೆ ಎಂದು ತೋರಿಸಲು ವೈದ್ಯರು ನೀಡಿದ ಎಕ್ಸರೇ ವರದಿಯನ್ನು ನಾನು ಜಪ್ತು ಪಡಿಸಿಕೊಂಡಿಲ್ಲ. ನಾನೇ ಈ ಪ್ರಕರಣವನ್ನು ಡಿಪಿ ಪ್ರಕರಣ ಎಂದು ಈ ಹಿಂದೆ ದಾಖಲಿಸಿದ್ದೆ ಅಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿ ಮಾಡಲು ಇಚ್ಛೆ ಇಲ್ಲದಿದ್ದರೂ ಮೇಲಾಧಿಕಾರಿಗಳಿಂದ ಆದೇಶ ಆಗಿದ್ದರಿಂದ ಇಚ್ಛೆಗೆ ವಿರುದ್ಧವಾಗಿ ಪ್ರಥಮ ವರ್ತಮಾನ ವರದಿ ಯನ್ನು ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ.

ದೂರು ಡಿ ವಾಯ್ ಎಸ್ ಪಿ ಕಚೇರಿಯಿಂದ ಟಪಾಲು ಮೂಲಕ ಬಂದಿರುತ್ತದೆ. ಡಿ ವಾಯ್ ಎಸ್ ಪಿ ರವರು ದೂರಿನಲ್ಲಿ ಪ್ರಥಮ ವರ್ತಮಾನ ವರದಿ ಮಾಡಿ ಎಂದು ನಿರ್ದೇಶನ ನೀಡಿರಲಿಲ್ಲ. ನಾನು ಸ್ಥಳಕ್ಕೆ ಹೋಗಿದ್ದೆ, ಪಂಚನಾಮೆ ಮಾಡಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ಥಳದ ನಕಾಶೆಯನ್ನು ಪಿ ಸಿ 861 ರವರು ತಯಾರಿಸಿರುತ್ತಾರೆ.

ನಕಾಶೆಯನ್ನು ಪಿ ಡಬ್ಲೂ ಡಿ ಇಂಜಿಯರ್ ರವರು ತಯಾರಿಸಬೇಕಾಗುತ್ತದೆ ಅಂದರೆ ಸರಿಯಲ್ಲ. ಚಾಸಾ -4 ರಿಂದ 6 ರವರ ಹೇಳಿಕೆಯನ್ನು ಪ್ರಕರಣದ ಅನುಕೂಲಕ್ಕೆ ತಕ್ಕಂತೆ ಬರೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಘಟನೆಯಾದಾಗಿನಿಂದ ಅಂದರೆ ದಿಃ 19-03-2016 ರಿಂದ ದೂರು ಸಲ್ಲಿಸುವವರೆಗೆ ಅಂದರೆ ದಿಃ 24-09-2016 ರವರೆಗೆ ಏಕೆ ತಡ ಆಯಿತು ಎಂದು ಚಾಸಾ -1 ರವರ ವಿವರಣೆಯನ್ನು ಹೇಳಿಕೆ ರೂಪದಲ್ಲಿ ಪಡೆದಿರುವುದಿಲ್ಲ.

ಚಾಸಾ -1 ರವರು ದೂರು ನೀಡಿದಾಗ ಅವರನ್ನು ಪರೀಕ್ಷೆಗೆ ಒಳಪಡಿಸುವಂತೆ ಹೊಸಪೇಟೆಯ ವೈದ್ಯಾಧಿಕಾರಿಗಳಿಗೆ ಪತ್ರದ ಮೂಲಕ ತಿಳಿಸಿರುತ್ತೇನೆ. ಸದರಿ ಪತ್ರವನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿರುತ್ತೇನೆ. ನಾನು ವೈದ್ಯಾಧಿಕಾರಿಗಳ ಹತ್ತಿರ ಹೋಗಿ ಚಾಸಾ -1 ರವರಿಗೆ ಏನಾಗಿದೆ ಮತ್ತು ಅವರ ಹಲ್ಲಿನಲ್ಲಿನ ತುಂಡಾದ ಲೋಹದ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಂಡಿರುವುದಿಲ್ಲ. ಹೊಸಪೇಟೆಯ ವೈದ್ಯಾಧಿಕಾರಿಗಳು ಯಾವುದೇ ಚಿಕಿತ್ಸೆ ನೀಡಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ ಅಂದರೆ ಸರಿಯಲ್ಲ. ನಾವು ಒತ್ತಡ ಹೇರಿ ಸದರಿಯವರಿಂದ ವರದಿ ಬರೆಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ.

ಚಾಸಾ -1 ರವರನ್ನು ಪರೀಕ್ಷಿಸುವಂತೆ ದಿಃ 23-10-2016 ರಂದು ಪತ್ರ ಬರೆದಿರುತ್ತೇನೆ. ಅದೇ ದಿನ ಚಾಸಾ -1 ರವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಅಂದರೆ ಸರಿ.

**CC 153/2017**

**ಸಿ ಡಬ್ಲೂ 10**

**ಪಿ ಡಬ್ಲೂಃ 7**

ಆಸ್ಪತ್ರೆಯ ಹೊರ ರೋಗಿ ಚೀಟಿಯ ಪ್ರಕಾರ ದಿಃ **28-09-2016** ರಂದು ಚಾಸಾ **-1** ರವರು ಆಸ್ಪತ್ರೆಗೆ ಹೋಗಿರುತ್ತಾರೆ ಅಂದರೆ ಸರಿ. ಸಾಕ್ಷಿ ಅಂತಿಮ ವರದಿಯಲ್ಲಿನ ಚೀಟಿಯೊಂದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ **12** ಎಂದು ಗುರುತಿಸಲಾಯಿತು.

ಪ್ರಕರಣದ ಅಂತಿಮ ವರದಿಯನ್ನು ನಾನೇ ಸಲ್ಲಿಸಿರುತ್ತೇನೆ. ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ, ಚಾಸಾ **-1** ರವರು ಪೋಲಿಸ ಪೇದೆ ಎಂಬ ಕಾರಣಕ್ಕೆ ಮತ್ತು ಪ್ರಕರಣದ ದೂರು ಡಿ ವಾಯ್ ಎಸ್ ಪಿ ಕಚೇರಿಯಿಂದ ಬಂದಿತ್ತು ಎಂಬ ಕಾರಣಕ್ಕೆ ಇಲ್ಲ ಸಲ್ಲದ ಆರೋಪ ಮಾಡಿ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ **-1** ರವರು ಹಾಜರುಪಡಿಸಿರುವ ವೈದ್ಯಕೀಯ ಖರ್ಚಿನ ಬಿಲ್ಲಗಳನ್ನು ಸೃಷ್ಟಿ ಮಾಡಲಾಗಿದೆ ಅಂದರೆ ಸರಿಯಲ್ಲ. ಪಿರ್ಯಾದುದಾರರು ಸಲ್ಲಿಸಿರುವ ದಾಖಲೆಗಳಿಗೂ, ದೂರಿನಲ್ಲಿನ ಆರೋಪಗಳಿಗೂ ಸಾಕಷ್ಟು ವ್ಯತ್ಯಾಸಗಳು ಇವೆ ಅಂದರೆ ಸರಿಯಲ್ಲ. ಎಸ್ ಡಿ ಎಂ ಆಸ್ಪತ್ರೆಯ ದಾಖಲೆಗಳನ್ನು ಯಾರು ತಂದು ಹಾಜರುಪಡಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ದಾಖಲೆಗಳನ್ನುಹಾಜರುಪಡಿಸಿದ ವ್ಯಕ್ತಿಯ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ. ನಾನು ದಾಖಲೆಗಳನ್ನು ಪರಿಶೀಲಿಸಿದಾಗ ಅವು ಮೂಲ ದಾಖಲೆಗಳಾಗಿದ್ದವು. ಮೂಲ ದಾಖಲೆಗಳನ್ನು ಲಗತ್ತಿಸಿಯೇ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ದಾಖಲೆಗಳೆಲ್ಲಾ ನೆರಳಚ್ಚು ದಾಖಲೆಗಳು ಹೊರತಾಗಿ ಮೂಲ ದಾಖಲೆಗಳಲ್ಲ ಅಂದರೆ ಸರಿಯಲ್ಲ.

ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.